11

# ಆತ್ಮದ ಲಂಗರು

## (6:9-20)

ಇಬ್ರಿಯ ಬರಹಗಾರನು ತನ್ನ ಓದುಗರನ್ನು ನಾಶನದ ಕಡೆಗೆ ಹೊಯ್ದನು.[1] ಅವರನ್ನು ಶಿಖರದ ತುದಿಗೆ ಕರೆದೊಯ್ದು, ಕೆಳಗಿನ ಅಪಾಯವನ್ನು ಮೇಲಿನಿಂದ ವೀಕ್ಷಿಸುವಂತೆ ಮಾಡಿದನು, ನಂತರ ಅವನು ಅವರನ್ನು ಹಿಂದಕ್ಕೆ ಎಳೆದನು: "ಆದರೆ ಪ್ರೀಯರೇ, ಈ ರೀತಿ ಯಾಗಿ ನಾವು ಮಾತಾಡಿದರೂ ನೀವು ಇದಕ್ಕಿಂತ ಉತ್ತಮವಾಗಿಯೇ ರಕ್ಷಣಕರವಾಗಿಯೂ ಇರುವ ಸ್ಥಿತಿಯಲ್ಲಿದ್ದೀರೆಂದು ದೃಢವಾಗಿ ನಂಬಿದ್ದೇನೆ" ಎಂಬ ಆತ್ಮ ವಿಶ್ವಾಸವನ್ನು ತೋರಿ ದನು (6:9). ಆ ನಿರೀಕ್ಷೆಯು ನಮ್ಮ ಪ್ರಾಣಕ್ಕೆ ಲಂಗರದ ಹಾಗಿದ್ದು ಭರವಸಕ್ಕೆ ಯೋಗ್ಯವಾ ದದ್ದು ಸ್ಥಿರವಾದದ್ದೂ ಆಗಿದೆ (6:19) ಅಂದನು.

"ರಕ್ಷಣೆಗೆ ಸಹಕಾರವಾದ" ಸಂಗತಿಯ ಕುರಿತು ವೇದ ಶಾಸ್ತ್ರಜ್ಞರು, ಬೋಧಕರು ಹಾಗೂ ಪ್ರಸಂಗಿಗಳು ವಿಶೇಷ ತರ್ಕಗಳನ್ನು ಮಾಡಿರುವರು. ಈ ವಿಷಯದ ಬಗ್ಗೆ ಪುಸ್ತಕಗಳನ್ನು ಬರೆದು, ಪ್ರಸಂಗಗಳನ್ನೂ ಮಾಡಲಾಗಿದೆ. ಕೇಳುಗರ ಜೀವಿತದಲ್ಲಿ ಅಡಗಿದ್ದ ಇತರೆ ಸಂಗತಿಗಳ ಕುರಿತ ವ್ಯಾಖ್ಯಾನವಾಗಿದೆ. ಅದು ಅವರು ಮಾಡಿದ ಕರ್ತನ ಸೇವೆಯಾಗಿತ್ತು.

ವಚನ 9ರ ರಕ್ಷಣೆಗೆ ಸಹಕರಿಸುವ ಸಂಗತಿಗಳು ಉತ್ತೇಜನದ ವಾಕ್ಯಗಳಾಗಿದೆ. ಅವನ ಓದುಗರು ಅಪಾಯದ ಅಂಚಿನಲ್ಲಿದ್ದರು. "ಅವರಲ್ಲಿ ಭರವಸವನ್ನು ಇಟ್ಟೆನು ಅಂದನು!" ಇತರರಲ್ಲಿ ಭರವಸ ಇಡಬೇಕೆಂದು ಇದರಿಂದ ತಿಳಿದು ಬರುತ್ತದೆ!

ಅವರು ಬಿದ್ದು ಹೋಗದಂತೆಯೂ, ಅವರು ಉತ್ತೇಜನವಾಗಿರುವಂತೆಯೂ ಏನು ಮಾಡಬೇಕಿತ್ತು? ಅವರು ನಿರೀಕ್ಷೆಯನ್ನು ಹಿಡಿಯಬೇಕಿತ್ತು. ವಚನ 11ರಲ್ಲಿ: "ನೀವು ಯಾವ ಆಸಕ್ತಿಯನ್ನು ತೋರಿದ್ದೀರೋ ನಿಮ್ಮ *ನಿರೀಕ್ಷೆ* ದೃಢಮಾಡಿಕೊಂಡು ಕಡೇ ತನಕ ಹಿಡಿದುಕೊಳ್ಳಿರಿ" (ಒತ್ತಿ ಹೇಳಿದ್ದು ನನ್ನದು). ನಂತರ ವಚನ 18 ಮತ್ತು 19ನ್ನು ಗಮನಿಸಿ: "ನಿರೀಕ್ಷೆಯು ನಮ್ಮ ಪ್ರಾಣಕ್ಕೆ ಲಂಗರದ ಹಾಗಿದ್ದು *ಭರವಸಕ್ಕೆ* ಯೋಗ್ಯವಾದದ್ದು, ಸ್ಥಿರವಾ ದದ್ದೂ ಆಗಿದೆ" (ಒತ್ತಿ ಹೇಳಿದ್ದು ನನ್ನದು). ಪುರಾತನ ಕಾಲದಲ್ಲಿದ್ದ ಸಂರಕ್ಷಣೆಯ ಕುರಿತು ಬರಹಗಾರನು ಹೇಳಿರುವನು. ಸಂರಕ್ಷಣೆಯ ಕೊರತೆಯಿರುವ ಪ್ರಪಂಚದಲ್ಲಿ, ನಮಗೆ ಸಂರಕ್ಷಣೆಯ ಅಗತ್ಯವಿದೆ.

ಕ್ರೈಸ್ತ ಜೀವಿತವು ಕೇವಲ ಭ್ರಮೆಯಾಗಿರದೆ, ಆಶೆ ಮತ್ತು ಆಕಾಂಶೆಗಳಾಗಿವೆ. 1 ಕೊರಿಂಥ 13:13 ಇದರಲ್ಲಿ ಮೂರು ಮಹತ್ವದ ಸಂಗತಿಗಳಿವೆ. ನಂಬಿಕೆ, ನಿರೀಕ್ಷೆ ಮತ್ತು ಪ್ರೀತಿ, ಪ್ರೀತಿ ನಂಬಿಕೆ ಬಗ್ಗೆ ಅನೇಕ ಪಾಠಗಳಿದ್ದರೂ, ನಿರೀಕ್ಷೆಯ ಬಗ್ಗೆ ಕೆಲವೇ ಪಾಠಗಳಿವೆ. ನಿರೀಕ್ಷೆಯ ಬಗ್ಗೆ ನೆನಪಿನ ಪಾಠವನ್ನು ನಾವು ನೀಡಿದ್ದೇವೆ.

### 1. ದೇವರ ಸ್ವಭಾವದ ನಿಮಿತ್ತ (6:10ಎ)

ಮಾನವರಾದ ನಾವು "ಪ್ರೀತಿಯ ಸೇವೆಯನ್ನು" ಮರೆಯಬಹುದು, ಆದರೆ ದೇವರು ಎಂದಿಗೂ ಮರೆಯುವದಿಲ್ಲ.

### 2. ಯಾಕಂದರೆ ನಾವು ಉತ್ತಮವಾದದ್ದನ್ನೇ ಮಾಡುತ್ತಿದ್ದೇವೆ (6:10ಬಿ-12ಎ)

ಮೂಲ ಓದುಗರ ಪ್ರೀತಿಯ ಸೇವೆಯು ಪೂರ್ಣವಾಗಿರಲಿಲ್ಲ, ಆದರೆ ಅವರು ಪ್ರೀತಿಯ


ಧ್ಯೋತಕವಾಗಿದ್ದವು. ಅವರು ತಮ್ಮ ಜೊತೆ ಕ್ರೈಸ್ತರಿಗೆ ಸಹಾಯಿಸಿದ್ದರು, ಅವರು ದೇವ ಜನರಿಗೆ ಸೇವೆ ಮಾಡುವವರಾಗಿದ್ದರು. ಕೊನೆಯವರೆಗೂ ಅದೇ ಆಸಕ್ತಿಯನ್ನು ಓದುಗರು ತೋರ ಬೇಕೆಂದು ಬರಹಗಾರನು ಬಯಸಿದನು. ಪರಿಪೂರ್ಣರಾಗಿರಬೇಕೆಂದು ದೇವರು ಬಯಸದೆ ಹೋದರು, ಉತ್ತಮವಾದದ್ದನ್ನು ಮಾಡಬೇಕೆಂದು ಬಯಸುತ್ತಾನೆ. ಈ ವಿಚಾರಗಳನ್ನು ಒಟ್ಟಿಗೆ ಸೇರಿರುವದಾದರೆ, "ಪೂರ್ಣ ನಿರೀಕ್ಷೆಯನ್ನು ಹೊಂದಲು" ಸಾಧ್ಯವಿದೆ!

### 3. ನಂಬಿಗಸ್ತರಾದವರನ್ನು ದೇವರು ಈ ಹಿಂದೆ ಆಶೀರ್ವದಿಸಿದ್ದನು (6:12ಬಿ-15)

"ಯಾರು ವಾಗ್ದಾನಗಳನ್ನು ನಂಬಿ ಅವುಗಳ ಫಲಕ್ಕೋಸ್ಕರ ಬಹು ದಿವಸಗಳವರೆಗೂ ಕಾದಿದ್ದು ಆ ಫಲವನ್ನು ಹೊಂದುತ್ತಾರೋ ಅವರನ್ನು ಅನುಸರಿಸಿರಿ ಎಂದು ಬರಹಗಾರನು ಕೋರಿದನು" (ವಚನ 12ಬಿ). 11ನೇ ಅಧ್ಯಾಯದಲ್ಲಿ ಅದರ ವಿಸ್ತರಣೆಯನ್ನು ನೀಡಲಾಗಿದೆ. ಸದ್ಯಕ್ಕೆ ಅವನು ಅಬ್ರಹಾಮನ ಉದಾಹರಣೆಯನ್ನು ನೀಡಿರುವನು (ವಚನಗಳು 13-15). ದೇವರು ಅಬ್ರಹಾಮನಿಗೆ ಮಹಾ ವಾಗ್ದಾನಗಳನ್ನು ನೀಡಿದ್ದರೂ. ಅನೇಕ ದಿವಸಗಳ ನಂತರ ಅವುಗಳು ಈಡೇರಿದವು. ಆ ದಿವಸಗಳಲ್ಲಿ ಅಬ್ರಹಾಮನು ನಿರೀಕ್ಷೆಯಿಂದ ಕಾದುಕೊಂಡಿದ್ದನು (ನೋಡಿರಿ ರೋಮಾಪುರ 4:18).

### 4. ಯಾಕಂದರೆ ದೇವರು ಸುಳ್ಳುಗಾರನಲ್ಲ (6:16-18)

ವಚನ 13ರಲ್ಲಿ, ದೇವರು ಸುಳ್ಳುಗಾರನಲ್ಲ ಎಂದು ಹೇಳಿ, ವಚನ 16ರಿಂದ 18ರ ವರೆಗಿನ ವಾಕ್ಯದಲ್ಲಿ ಅದರ ವಿವರಣೆಯನ್ನು ನೀಡಲಾಗಿದೆ. ದೇವರ ವಾಗ್ದಾನಗಳನ್ನು ನಾವು ನಿರೀಕ್ಷಿಸಬಹುದು!




### 5. ನಮ್ಮ ನಿರೀಕ್ಷೆಯು ಯೇಸುವಿನಲ್ಲಿ ಲಂಗರನ್ನು ಹಾಕಿದೆ (6:18ಬಿ-20[2])

ನಮ್ಮ ಲಂಗರನ್ನು ಸುಳಿ ನೀರಿನಲ್ಲಿ ಹಾಕದೆ, ಪರಲೋಕದ ಮಹಾ ಪರಿಶುದ್ಧ ಸ್ಥಳದಲ್ಲಿ ಹಾಕಲಾಗಿದೆ.

ಇದರ ಮಹತ್ವವಾದರು ಏನು? ಅಲ್ಲಿ ಯೇಸು ಇರುವನು! ಆತನು ನಮ್ಮ ಲಂಗರನ್ನು ಭದ್ರಪಡಿಸಲು ಪರಲೋಕದಲ್ಲಿದ್ದಾನೆ. ನಮ್ಮ ನಿರೀಕ್ಷೆಯು ಯೇಸುವಿನಲ್ಲಿ ಹಾಗೂ ಆತನು ಮಾಡಿರುವ ಕಾರ್ಯಗಳಲ್ಲಿ ಧೃಢವಾಗಿದೆ (ಕೊಲೊಸ್ಸೆ 1:27).

ವಚನ 20ರಲ್ಲಿ ಬರಹಗಾರನು ಮಹಾಯಾಜಕನಾದ ಯೇಸುವಿನ ವಿಷಯಕ್ಕೆ

ಹಿಂದಿರುಗಿರುವನು. "ಮೇಲ್ಕಿಜೆದೇಕನ ತರಹದ ಯಾಜಕ" ಎಂದಿರುವನು (5:10). "ಸತ್ಯದ ನೆರಳು" ಎಂಬ ಮುಂದಿನ ಪಾಠದಲ್ಲಿ ಅದನ್ನು ಅರಿಯೋಣ.

---

## ಬೋಧಕರಿಗಾಗಿ ಟಿಪ್ಪಣಿ

ಇಬ್ರಿಯ ಪತ್ರಿಕೆಯಲ್ಲಿನ ನಿರೀಕ್ಷೆಯ ಬಗ್ಗೆ ಒತ್ತಿ ಹೇಳಿರಿ (3:6; 7:19; 10:23).

---

ಟಿಪ್ಪಣಿಗಳು

[1]"ಆತ್ಮೀಕ ವೃದ್ಧಿಯ ಅಗತ್ಯತೆ" ಎಂಬ ಪಾಠವನ್ನು ಮನನ ಮಾಡಬಹುದು 6:6, 8.
[2]ದೇವದರ್ಶನದ ಗುಡಾರದಲ್ಲಿನ ಪರಿಶುದ್ಧ ಹಾಗೂ ಮಹಾ ಪರಿಶುದ್ಧ ಸ್ಥಳದ ನಡುವೆ ತೆರೆಯನ್ನು ಹಾಕಿದ್ದರು.